**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 90/2020**

**ಚಾ.ಸಾಃ 24, ಪ್ರಾ.ಸಾಃ 12**

| | |
|---|---|
| ಸಾಕ್ಷಿದಾರನ ಹೆಸರು | ವಸಂತ ಆಚಾರ್ |
| ತಂದೆಯ ಹೆಸರು | ರಾಮಾ ಆಚಾರ್ |
| ವಯಸ್ಸು | 58 ವರ್ಷಗಳು |
| ಉದ್ಯೋಗ | ಪೋಲೀಸ್ ನಿರೀಕ್ಷಕರು, ಗೋಕರ್ಣ ಪೋಲೀಸ್ ಠಾಣೆ |
| ವಾಸ್ತವ್ಯ | ಗೋಕರ್ಣ |

**ಸಾಕ್ಷಿಯನ್ನು ದಿನಾಂಕಃ 24-10-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ದಿನಾಂಕ 25-09-2019 ರಿಂದ ದಿನಾಂಕ 03-10-2020 ರ ವರೆಗೆ ಹೊನ್ನಾವರ ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕೆಲಸ ಮಾಡಿರುತ್ತೇನೆ.

ಈ ಪ್ರಕರಣದ ಕಡತವನ್ನು ದಿನಾಂಕಃ **25-09-2019** ರಂದು ಚಾಸಾ-23 ರವರಿಂದ ಪಡೆದು ಪರಿಶೀಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ. ಆದರೆ ಆರೋಪಿತರ ಬಗ್ಗೆ, ಮಾಲಿನ ಬಗ್ಗೆ ಯಾವುದೇ ಪತ್ತೆ ಆಗಿರುವುದಿಲ್ಲ.

ದಿನಾಂಕ 31-07-2020 ರಂದು ಸಿಬ್ಬಂದಿಯೊಂದಿಗೆ ಕಡತೋಕಾ ಜಡ್ಡಿಗದ್ದೆ ಗಸ್ತು ಕರ್ತವ್ಯ ಮಾಡುತ್ತಿದ್ದಾಗ ಚಂದಾವರ ಕಡೆಯಿಂದ ಮೋಟಾರು ಸೈಕಲ್ಲಿನಲ್ಲಿ 2 ಜನ ಬರುತ್ತಿದ್ದು ಅವರನ್ನು ಹಿಡಿದು ವಿಚಾರಿಸಲಾಗಿ ಅವರು ಯಾವುದೇ ಸಮರ್ಪಕವಾದ ಉತ್ತರವನ್ನು ನೀಡಿರುವುದಿಲ್ಲ. ಆದ್ದರಿಂದ ಅವರನ್ನು ಠಾಣೆಗೆ ಕರೆತಂದು ಹೆಸರು, ವಿಳಾಸ ವಿಚಾರಿಸಲಾಗಿ ಅವರು ಸಜ್ಜದ್ ಅಹ್ಮದ್ ತಂದೆ ಕುತುಬುದ್ದಿನ್ ಗಣಿ ಮತ್ತು ಮುಬಾಶಿರ್ ಕುತುಬುದ್ದಿನ್ ಗಣಿ, ಚಂದಾವರ ಎಂದು ತಿಳಿಸಿರುತ್ತಾರೆ. ಸಂಶಯದಿಂದ ಅವರನ್ನು ಕೂಲಂಕುಷವಾಗಿ ವಿಚಾರಿಸಲಾಗಿ ಅವರು ಈ ಪ್ರಕರಣದಲ್ಲಿ ಕಳುವು ಮಾಡಿರುವುದನ್ನು ಒಪ್ಪಿಕೊಂಡು ಸ್ವ ಖುಷಿ ಹೇಳಿಕೆಯನ್ನು ನೀಡಿರುತ್ತಾರೆ. ಅವರು ತಮ್ಮ ಹೇಳಿಕೆಯಲ್ಲಿ ಈ ಪ್ರಕರಣ ಅಲ್ಲದೇ ಇತರೇ 8 ಪ್ರಕರಣಗಳಲ್ಲಿ ತಾವು ಕಳುವು ಮಾಡಿರುವುದಾಗಿ ತಿಳಿಸಿರುತ್ತಾರೆ. ಆರೋಪಿತರನ್ನು ಠಾಣಾ ಮೊಕದ್ದಮೆ ಸಂಖ್ಯೆ 67/2020 ರಲ್ಲಿ ಬಂಧಿಸಿ ದಸ್ತಗಿರಿ ನಿಯಮ ಪಾಲಿಸಿರುತ್ತೇನೆ. ಆರೋಪಿತರು ತಾವು ಕಳುವು ಮಾಡಿರುವ ಸ್ಥಳವನ್ನು ಮತ್ತು ಮಾಲಿನ ಬಗ್ಗೆ ಮಾಹಿತಿ ನೀಡುವುದಾಗಿ ಹೇಳಿರುತ್ತಾರೆ.

ಆರೋಪಿತರ ಸ್ವ ಖುಷಿ ಹೇಳಿಕೆಯಂತೆ ಚಾಸಾ-4 ಮತ್ತು 5 ರವರನ್ನು ಠಾಣೆಗೆ ಕರೆಸಿಕೊಂಡು ಪಂಚರಾಗಿ ಬರಬೇಕೆಂದು ಕೇಳಿಕೊಂಡಿದ್ದು ಅದರಂತೆ ಆರೋಪಿತರು ಕಳುವು ಮಾಡಲು ಬಳಸಿದ ಕಾರನ್ನು ಮತ್ತು ಕಬ್ಬಿಣದ ರಾಡನ್ನು ಮನೆಯಲ್ಲಿ ಇಟ್ಟಿರುವುದಾಗಿ ಮತ್ತು ಬಂದರೆ ತೋರಿಸುವುದಾಗಿ ಹೇಳಿದ್ದು ಅದರಂತೆ ಈ ವಿಚಾರವನ್ನು ಪಂಚರಿಗೆ ತಿಳಿಸಿದ್ದು ಅವರು ಒಪ್ಪಿಕೊಂಡಿದ್ದು, ನಂತರ ಆರೋಪಿತರನ್ನು, ಪಂಚರನ್ನು ಚಂದಾವರ ಗ್ರಾಮದ ಆರೋಪಿತರ ಮನೆಗೆ ಕರೆದುಕೊಂಡ ಹೋಗಲಾಗಿ

ಅಲ್ಲಿ ಆರೋಪಿತರು ಕೃತ್ಯಕ್ಕೆ ಬಳಸಿದ ಕಾರನ್ನು ಮನೆಯ ಮುಂದೆ ನಿಲ್ಲಿಸಿದ್ದು ಅದನ್ನು ತೋರಿಸಿದ್ದು ಇದನ್ನೇ ಕಳುವು ಮಾಡಲು ಬಳಸಿರುವುದಾಗಿ ಹೇಳಿರುತ್ತಾರೆ. ಸದರಿ ಕಾರನ್ನು ಪರಿಶೀಲಿಸಿದಾಗ ಕಾರ ನಂ. ಕೆಎ-05/ಎಎಫ್-4916 ಆಗಿರುತ್ತದೆ. 1 ನೇ ಆರೋಪಿ ಸದರಿ ಕಾರಿನ ಮುಂಭಾಗದ ಎಡಬದಿಯ ಡೋರ್ ತೆಗೆದು ಡ್ಯಾಶಬೋರ್ಡನಲ್ಲಿದ್ದ ಒಂದು ಕಬ್ಬಿಣದ ರಾಡನ್ನು ಹಾಜರುಪಡಿಸಿದ್ದು ಇದನ್ನೂ ಸಹ ಮನೆಯ ಬಾಗಿಲು ಒಡೆಯಲು ಉಪಯೋಗಿಸಿರುವುದಾಗಿ ತಿಳಿಸಿರುತ್ತಾರೆ. ನಂತರ ಆತ ನಮ್ಮನ್ನು ಮನೆಯ ಒಳಕ್ಕೆ ಕರೆದುಕೊಂಡು ಹೋಗಿ ಅಲ್ಲಿದ್ದ ಒಂದು ಕಪಾಟಿನಲ್ಲಿ ಬಂಗಾರದ ಮೂಗುತಿಯನ್ನು ತೆಗೆದು ಹಾಜರುಪಡಿಸಿದ್ದು ಕಾರು, ಕಬ್ಬಿಣದ ರಾಡು ಮತ್ತು ಮೂಗುತಿಯನ್ನು ಪಂಚರ ಸಮಕ್ಷಮ ಪಂಚನಾಮೆಯಡಿಯಲ್ಲಿ ಜಪ್ತುಪಡಿಸಿಕೊಂಡು ಫೋಟೋ ತೆಗೆಸಿರುತ್ತೇನೆ. ಸದರಿ ಪಂಚನಾಮೆಯ ನಕಲನ್ನು ಈಗ ನೋಡುತ್ತಿದ್ದು ನಿಪಿ-16 ಎಂದು, ಸಾಕ್ಷಿ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ಕಾರನ್ನು ಮತ್ತು ಮೂಗುತಿಯನ್ನು ಅಮಾನತ್ತುಪಡಿಸಿಕೊಳ್ಳುವ ಕಾಲಕ್ಕೆ ತೆಗೆದಿದ್ದ 4 ಫೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ನಿಪಿ-17 ರಿಂದ 20 ಎಂದು ಗುರುತಿಸಲಾಯಿತು. ನಂತರ ಠಾಣೆಗೆ ಅಮಾನತ್ತುಪಡಿಸಿಕೊಂಡಿದ್ದ ವಸ್ತುಗಳನ್ನು ಠಾಣಾ ಪಿಎಫ್‌ನಲ್ಲಿ ನಮೂದಿಸಿರುತ್ತೇನೆ. ನಂತರ ಆರೋಪಿತರನ್ನು ಸೂಕ್ತ ಭದ್ರತೆಯಲ್ಲಿ ಇರಿಸಿರುತ್ತೇನೆ.

ದಿನಾಂಕ 01-08-2020 ರಂದು ಆರೋಪಿತರನ್ನು ನಾವು ಹಿಡಿದ ಸಮಯಕ್ಕೆ ಬರುತ್ತಿದ್ದ ಬೈಕನ್ನೂ ಸಹ ಕೃತ್ಯಕ್ಕೆ ಬಳಸಿರುವುದಾಗಿ ತಮ್ಮ ಹೇಳಿಕೆಯಲ್ಲಿ ಹೇಳಿದ್ದು ಮತ್ತು ಅದನ್ನು ಆರೋಪಿತರನ್ನು ಹಿಡಿದಾಗ ಅದನ್ನು ಠಾಣೆಯ ಮುಂಭಾಗದಲ್ಲಿ ನಿಲ್ಲಿಸಿದ್ದು ಠಾಣೆಗೆ 2 ಜನ ಪಂಚರನ್ನು ಬರಮಾಡಿಕೊಂಡು ಠಾಣೆಯ ಮುಂದೆ ನಿಲ್ಲಿಸಿದ್ದ ಬಜಾಜ್ ಪಲ್ಸರ್ ಕಂಪನಿಯ ಕೆಂಪು ಮತ್ತು ಬಿಳಿ ಬಣ್ಣದ ಕೆಎ-47/ಕೆ-2856 ಬೈಕನ್ನು ಪರಿಶೀಲಿಸಿ ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡು ಫೋಟೋ ತೆಗೆಸಿರುತ್ತೇನೆ. ಸದರಿ ಪಂಚನಾಮೆಯ ದೃಢೀಕೃತ ನಕಲನ್ನು ಈಗ ನೋಡುತ್ತಿದ್ದು ನಿಪಿ-21 ಎಂದು, ಸಾಕ್ಷಿ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಫೋಟೋವನ್ನು ನಿಪಿ-22 ಎಂದು ಗುರುತಿಸಲಾಯಿತು. ಸದರಿ ಬೈಕನ್ನು ಠಾಣಾ ಪಿಎಫ್‌ನಲ್ಲಿ ನಮೂದಿಸಿರುತ್ತೇನೆ.

ಆರೋಪಿತರನ್ನು ಮೂಲ ಪ್ರಕರಣದಲ್ಲಿ ರಿಮಾಂಡ್ ಅರ್ಜಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಂತರ ಆರೋಪಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತೇನೆ.

ತನಿಖೆ ಇನ್ನೂ ಪೂರ್ಣಗೊಂಡಿಲ್ಲವಾದ್ದರಿಂದ ದಿನಾಂಕ 04-08-2020 ರಂದು ಪುನಃ ಆರೋಪಿತರನ್ನು ಮೂಲ ಪ್ರಕರಣದಲ್ಲಿ ಪೋಲೀಸ್ ಕಸ್ಟಡಿಗೆ ಪಡೆದುಕೊಂಡಿರುತ್ತೇನೆ.

ಆರೋಪಿತರು ಈ ಹಿಂದೆ ತಮ್ಮ ಸ್ವ ಖುಷಿ ಹೇಳಿಕೆಯಲ್ಲಿ ಹೇಳಿರುವಂತೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹೆಬ್ಬಾರ್ನಕೇರಿಯಲ್ಲಿರುವ ಪಿರ್ಯಾದಿಯ ಮನೆಯಲ್ಲಿ ಹಣ ಮತ್ತು ಬಂಗಾರ ಕಳುವು ಮಾಡಿದ್ದು ಸದರಿ ಸ್ಥಳವನ್ನು ತೋರಿಸುವುದಾಗಿ ಹೇಳಿದ್ದರಿಂದ 2 ಜನ ಪಂಚರೊಡನೆ ಘಟನಾ ಸ್ಥಳಕ್ಕೆ ಹೋಗಿದ್ದು ಅಲ್ಲಿ ಆರೋಪಿತರು ಪಿರ್ಯಾದಿಯ ಮನೆಯನ್ನು ತೋರಿಸಿ ವಾಹನವನ್ನು ನಿಲ್ಲಿಸುವಂತೆ

ಹೇಳಿ ಸದರಿ ಮನೆಯಲ್ಲಿ ತಾವು ಒಡವೆ ಕಳ್ಳತನ ಮಾಡಿರುವುದಾಗಿ ಹೇಳಿರುತ್ತಾರೆ. ನಂತರ ಅವರನ್ನು ಸದರಿ ಮನೆಗೆ ಕರೆದುಕೊಂಡು ಹೋಗಲಾಗಿ ಅವರು ಮನೆಯ ಕಿಟಕಿಯ ಕಬ್ಬಿಣದ ಗ್ರಿಲ್ಸಗಳನ್ನು ಕಬ್ಬಿಣದ ರಾಡ್‌ನಿಂದ ಒಡೆದು ಮನೆಯ ಒಳಗೆ ಹೋಗಿ ಬೆಡ್ ರೂಮನಲ್ಲಿದ್ದ ಕಪಾಟಿನಲ್ಲಿದ್ದ ಹಣ ಮತ್ತು ಬಂಗಾರವನ್ನು ಕಳ್ಳತನ ಮಾಡಿರುವುದನ್ನು ತೋರಿಸಿರುತ್ತಾರೆ. ಸದರಿ ಸ್ಥಳದಲ್ಲಿ ಈಗಾಗಲೇ ಮುಂದುವರಿಸಿಕೊಂಡು ಬಂದಿದ್ದ ಪಂಚನಾಮೆಯನ್ನು ಸದರಿ ಸ್ಥಳದಲ್ಲಿಯೂ ಮುಂದುವರೆಸಿ ಪಂಚನಾಮೆಯನ್ನು ಮಧ್ಯಾಹ್ನ 03-50 ರಿಂದ 04-20ರ ಸಮಯದಲ್ಲಿ ಬರೆದು ಫೋಟೋಗಳನ್ನು ತೆಗೆಸಿರುತ್ತೇನೆ. ನಂತರ ಸದರಿ ಪಂಚನಾಮೆಯನ್ನು ಮುಂದುವರೆಸುತ್ತಾ ಇತರೇ ಪ್ರಕರಣದ ಸ್ಥಳಗಳಿಗೆ ಆರೋಪಿತರು ನಮ್ಮನ್ನು ಕರೆದುಕೊಂಡು ಹೋಗಿದ್ದು ಅಲ್ಲಿಯೂ ಸಹ ಪಂಚನಾಮೆಯನ್ನು ಮುಂದುವರೆಸಿರುತ್ತೇನೆ. ಸದರಿ ಪಂಚನಾಮೆಯ ದೃಢೀಕೃತ ನಕಲನ್ನು ನೋಡುತ್ತಿದ್ದು ನಿಪಿ-4 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು. ಸದರಿ ಫೋಟೋವನ್ನು ಈಗ ನೋಡುತ್ತಿದ್ದು ನಿಪಿ-23 ಎಂದು ಗುರುತಿಸಲಾಯಿತು.

ಆರೋಪಿತರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ತಾವು ಕಳುವು ಮಾಡಿದ ಒಡವೆಗಳ ಪೈಕಿ ಕೆಲವು ಒಡವೆಗಳನ್ನು ಅಕ್ಕಸಾಲಿಗರಾದ ಚಾಸಾ-11 ರಿಂದ 13ರವರ ಬಳಿ ಅಡವು ಇಟ್ಟಿರುವುದಾಗಿ ಹೇಳಿರುತ್ತಾರೆ. ಅದರಂತೆ ಚಾಸಾ-11 ರಿಂದ 13ರವರನ್ನು ಠಾಣೆಗೆ ಕರೆಸಿ ಆರೋಪಿತರನ್ನು ತೋರಿಸಿ ಆರೋಪಿತರು ಒಡವೆ ಅಡವು ಇಟ್ಟಿರುವ ಬಗ್ಗೆ ವಿಚಾರಿಸಿರುತ್ತೇನೆ. ಅವರು ಒಪ್ಪಿಕೊಂಡಿರುತ್ತಾರೆ ಮತ್ತು ಅದೇ ದಿನ 05-08-2020ರಂದು ಆರೋಪಿತರು ಗಿರವಿ ಇಟ್ಟಿದ್ದ ಒಡವೆಗಳನ್ನು ಠಾಣೆಗೆ ತಂದು ಹಾಜರುಪಡಿಸಿರುತ್ತಾರೆ. ಚಾಸಾ-11 ರಿಂದ 13ರವರು ಹಾಜರು ಪಡಿಸಿದ ಒಡವೆಗಳನ್ನು 3 ಪ್ರತ್ಯೇಕ ಪಂಚನಾಮೆಗಳ ಅಡಿಯಲ್ಲಿ ಬೆಳಿಗ್ಗೆ 11-30 ರಿಂದ 12-30ರ ಸಮಯದಲ್ಲಿ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಅಕ್ಕಸಾಲಿಗರಾದ ಚಾಸಾ-14ರವರ ಮೂಲಕ ತೂಕಮಾಡಿಸಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ 3 ಅಮಾನತ್ತು ಪಂಚನಾಮೆಗಳನ್ನು ನೋಡುತ್ತಿದ್ದು ನಿಪಿ-7, 11 ಮತ್ತು 13 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-7(ಇ), 11(ಸಿ) ಮತ್ತು 13(ಸಿ) ಎಂದು ಗುರುತಿಸಲಾಯಿತು. ಸದರಿ ಒಡವೆಗಳನ್ನು ಠಾಣಾ ಪಿಎಫ್ ನಲ್ಲಿ ಮೂಲ ಪ್ರಕರಣದಲ್ಲಿ ನಮೂದಿಸಿರುತ್ತೇನೆ. ಸದರಿ ಪಿಎಫ್‌ನ ಅ.ನಂ.12 ರಿಂದ 14 ಈ ಪ್ರಕರಣದ ಒಡವೆಯಾಗಿರುತ್ತದೆ. ಆ ಕಾಲಕ್ಕೆ ಒಂದು ಫೋಟೋ ತೆಗೆದಿದ್ದು ಅದನ್ನು ಈಗ ನೋಡುತ್ತಿದ್ದು ನಿಪಿ-8 ಎಂದು ಗುರುತಿಸಲಾಗಿದೆ. ಸದರಿ ಒಡವೆಗಳನ್ನು ನೋಡಿದರೆ ಗುರುತಿಸುತ್ತೇನೆ. ನಿಪಿ-9 ಮತ್ತು 10 ಫೋಟೋದಲ್ಲಿರುವ ಒಡವೆಗಳನ್ನು ನೋಡಿ ಗುರುತಿಸಿರುತ್ತಾರೆ.

ಸದರಿ ಒಡವೆಗಳನ್ನು ಹಾಜರುಪಡಿಸಿದ ಬಗ್ಗೆ ರಸೀದಿ ಪತ್ರ ಪಡೆದಿರುತ್ತೇನೆ. ಸದರಿ ಪತ್ರ ನೋಡುತ್ತಿದ್ದು ಅದನ್ನು ನಿಪಿ-15 ಎಂದು ಗುರುತಿಸಲಾಗಿದೆ.

ಅದೇ ದಿನ ಚಾಸಾ-1ರವರನ್ನು ಠಾಣೆಗೆ ಕರೆಸಿದ್ದು ಒಡವೆಗಳನ್ನು ತೋರಿಸಿದ್ದು ಒಡವೆ ಗುರುತಿಸಿದ ಬಗ್ಗೆ ಚಾಸಾ-1ರವರ ಮರುಹೇಳಿಕೆ ಮತ್ತು ಚಾಸಾ-11 ರಿಂದ 14ರವರ ಹೇಳಿಕೆ ಪಡೆದಿರುತ್ತೇನೆ.

ದಿನಾಂಕ 14-08-2020 ರಂದು ಆರೋಪಿತರನ್ನು ಮೂಲ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಿನಾಂಕ 02-10-2020ರಂದು ಚಾಸಾ-20ರವರಿಂದ ಫೋಟೋ ತೆಗೆಸಿದ ಬಗ್ಗೆ ಕಲಂ 65-ಬಿ ಅಡಿ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತೇನೆ. ಸದರಿ ಪ್ರಮಾಣಪತ್ರವನ್ನು ನೋಡುತ್ತಿದ್ದು ನಿಪಿ-24 ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-21ರವರ ಹೇಳಿಕೆ ಪಡೆದಿರುತ್ತೇನೆ.

ದಿನಾಂಕ 03-10-2020ರಂದು ಕೇಸಿನ ಕಡತವನ್ನು ಚಾಸಾ-25ರವರಿಗೆ ವಹಿಸಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ. ಎಂ. ಭಂಡಾರಿಯವರು ಸಮಯಕೋರಿದ್ದರಿಂದ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**